**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ: ಸಿ3(7) ಪ್ರಾ..ಶಿ ವರ್ಗಾ ಖಾ.ಹು.28/2013–14 ದಿನಾಂಕ;–22–06–2013

ಜ್ಞಾಪನಾ

**ವಿಷಯ:–** 2013–14 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಖಾಲಿ ಹುದ್ದೆಗಳನ್ನು ಅಪ್ ಲೋಡ್ ಮಾಡುವ ಬಗ್ಗೆ

ಉಲ್ಲೇಖ:–1).ನಿರ್ದೇಶಕರು (ಕಾರ್ಯಕ್ರಮಗಳು) ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ ಬೆಂಗಳೂರು ರವರ ಪತ್ರ ಸಂಖ್ಯೆ:– ಸ.ಶಿ.ಅ/ಆಕ್ಸಿಸ್/ಕೆ.ಜಿ.ಬಿವಿ/ಶಿಕ್ಷಕರ ನೇಮಕಾತಿ/2012–13 ದಿನಾಂಕ;– 18–06–2013

2)ದಿನಾಂಕ;– 22–06–2013 ರಂದು ನಡೆದವರ್ಗಾಣಾ ನೋಡಲ್ ಅಧಿಕಾರಿಗಳ ಸಭೆಯಲ್ಲಿ ಕೈಗೊಂಡ ತೀರ್ಮಾನಗಳು

---

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2013–14 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ (ಅನುಭಂಧ ಪ್ರತಿ ಲಗತ್ತಿಸಿದೆ)ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಮಂಜೂರಾದ 07 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು ಮತ್ತು 5 ನಿರ್ಧಿಷ್ಠ ವರ್ಗದ ಮಕ್ಕಳ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ವರ್ಗಾವಣೆ ಮೂಲಕ ಶಿಕ್ಷಕರನ್ನು ಭರ್ತಿ ಮಾಡಲು ಕೊರಿರುವುದರಿಂದ ತಮ್ಮ ಜಿಲ್ಲೆಯಲ್ಲಿ ಇರುವ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು ಮತ್ತು ನಿರ್ಧಿಷ್ಠ ವರ್ಗದ ಮಕ್ಕಳ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕಂಪ್ಯೂಟರ್ ಮೂಲಕ ಅಪ್ ಲೋಡ್ ಮಾಡಲು ತಿಳಿಸಿದೆ.

**ವಿಶೇಷ ಸೂಚನೆ;–**

1) ಹಾಗೂ ಇನ್ನಿತರೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸ್ಪಷ್ಠ ಖಾಲಿ ಹುದ್ದೆ ಮತ್ತು ವಿಷಯವಾರು ಖಾಲಿ ಇರುವ ಹುದ್ದೆಗಳನ್ನು ಪರಿಶೀಲಿಸಿಕೊಂಡು ಅಪ್ ಲೋಡ್ ಮಾಡಲು ತಿಳಿಸಿದೆ. ಕಾರಣ ವರ್ಗಾವಣೆ ಸಮಯದಲ್ಲಿ ಗೊಂದಲ ಉಂಟಾಗುತ್ತಿರುವ ಹಿನ್ನಲೆಯಲ್ಲಿ ವಿಶೇಷವಾಗಿ ಗಮನ ಹರಿಸಲು ತಿಳಿಸಿದೆ. ವರ್ಗಾವಣೆ ಸಮಯದಲ್ಲಿ ಗೊಂದಲ ಉಂಟಾದಲ್ಲಿ ಅಥವಾ ನ್ಯಾಯಾಲಯದಲ್ಲಿ ಶಿಕ್ಷಕರು ದಾವೆ ಹೂಡಿದಲ್ಲಿ ತಮ್ಮನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.
2) ಹೆಚ್ಚುವರಿ ಎಂದು ಗುರುತಿಸಿರುವ ಶಿಕ್ಷಕರ ಖಾಲಿ ಹುದ್ದೆಗಳನ್ನು ವರ್ಗಾವಣೆಗೆ ತೋರಿಸ ಬಾರದು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಸ್ಥಳಾಂತರಗೊಂಡಿದ್ದಲ್ಲಿ ಅಂತಹ ಹುದ್ದೆಗಳನ್ನು ಖಾಲಿ ಹುದ್ದೆ ಎಂದು ಪರಿಗಣಿಸ ಬಾರದು.
3) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ 120 ಕ್ಕಿಂತ ಕಡಿಮೆ ಇದ್ದಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದ್ದಲ್ಲಿ ವರ್ಗಾವಣೆ ಕೌನ್ಸಿಲಿಂಗ್ ನಲ್ಲಿ ಭರ್ತಿ ಮಾಡಲು ಅವಕಾಶವಿರುವುದಿಲ್ಲ.
4) ಪಿ.ಟಿ.ಆರ್. (PTR) ಅನುಪಾತ 1;30 ಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಬ್ಲಾಕ್‌ಗಳಲ್ಲಿ ವರ್ಗಾವಣೆ ಸಂಧರ್ಭದಲ್ಲಿ ಎಷ್ಟು ಶಿಕ್ಷಕರು ಆ ಬ್ಲಾಕ್‌ನ ಒಳಗೆ ಬರುತ್ತಾರೋ ಅಷ್ಟು ಶಿಕ್ಷಕರು ಮಾತ್ರ ಆ ಬ್ಲಾಕ್ ನಿಂದ ಹೊರಗೆ ಹೋಗಲು ಅವಕಾಶವಿರುತ್ತದೆ.
5) ಖಾಲಿ ಹುದ್ದೆಗಳನ್ನು ದಿ: 31.05.2013ರಂದು ಇದ್ದಂತೆ ಪರಿಗಣಿಸಬೇಕು.
6) 2009–10ರ ನಂತರ ಮಂಜೂರಾದ ಎಸ್‌ಎಸ್‌ಎ ಶಿಕ್ಷಕರ ಹುದ್ದೆಗಳನ್ನು ತುಂಬಬಾರದು. [ಕಾರಣ ಎಸ್‌ಎಸ್‌ಎಯಿಂದ ಪ್ರಸಕ್ತ ಸಾಲಿಗೆ ವೇತನಾನುದಾನ ಮಂಜೂರಾಗಿಲ್ಲ]

(ಮಾನ್ಯ ಆಯುಕ್ತರು ಸಾ.ಶಿ.ಇ ರವರ ಆದೇಶದ ಮೇರೆಗೆ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

**ಗೆ**

ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ

\\TYPING3SERVER\typing3server\D\EST3\trns circu.doc

ಅನುಬಂಧ

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಶಾಲೆಯ ವಿಧ | ಶಾಲೆಯ ಹೆಸರು ಮತ್ತು ವಿಳಾಸ | ವರ್ಗಾವಣೆ ಮಾಡಬೇಕಾಗಿರುವ ಶಿಕ್ಷಕರ ವಿವರಗಳು (ಕನ್ನಡ ಮಾಧ್ಯಮ ಶಾಲೆಗಳು): ಮುಖ್ಯ ಶಿಕ್ಷಕರು ಹುದ್ದೆ (ಪ್ರೌಢ ಶಾಲಾ ಸಹ ಶಿಕ್ಷಕರ ತತ್ಸಮಾನ ಹುದ್ದೆ) | ವಿಜ್ಞಾನ ಶಿಕ್ಷಕರು (ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಭಾಷೆ ಶಿಕ್ಷಕರು (ಕನ್ನಡ)(ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಭಾಷಾ ಶಿಕ್ಷಕರು (ಆಂಗ್ಲ) (ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಒಟ್ಟು | ಷರಾ |
|---|---|---|---|---|---|---|---|---|---|---|
| | | | | ಹೊಸದಾಗಿ ಮಂಜೂರಾಗಿರುವ 7 ಕೆ.ಜಿ.ಬಿ.ವಿ. ಮತ್ತು 5 ನಿರ್ಧಿಷ್ಟ ವರ್ಗಗಳ ಮಕ್ಕಳ ವಸತಿ ಶಾಲೆಗಳಿಗೆ ಮುಖ್ಯಶಿಕ್ಷಕರ ಹಾಗೂ ಸಹ ಶಿಕ್ಷಕರ ಹುದ್ದೆಗಳ ಬಗ್ಗೆ | | | | | | |
| 1 | ಮೈಸೂರು | ಹುಣಸೂರು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಹಳೆ ಸಂತೆ ಮೈದಾನ,ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | ಕ್ರಮ ಸಂಖ್ಯೆ 1 ರಿಂದ 7 ರವರೆಗೆ ನಮೂದಿಸಿರುವ ಕೆ.ಜಿ.ಬಿ.ವಿ ಶಾಲೆಗಳಿಗೆ ಮಹಿಳಾ ಶಿಕ್ಷಕರಿಂದ ತುಂಬಲು ಕೋರಿದೆ. |
| 2 | ಮೈಸೂರು | ಮೈಸೂರು ಗ್ರಾಮಾಂತರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಆಲನಹಳ್ಳಿ ಮೈಸೂರು ಗ್ರಾಮಾಂತರ ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 3 | ಮೈಸೂರು | ನಂಜನಗೂಡು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಕೆ.ಆರ್.ನಗರ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 4 | ಮೈಸೂರು | ಟಿ.ನರಸೀಪುರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಬನ್ನೂರು, ಟಿ. ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 5 | ಮಂಡ್ಯ | ಮಳವಳ್ಳಿ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಅಲಗುರು,. ಮಲವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 6 | ಮಂಡ್ಯ | ಪಾಂಡವಪುರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಹರೋಹಳ್ಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 7 | ಚಾಮರಾಜನಗರ | ಯಳಂದೂರು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 8 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ (ತಲಘಟ್ಟಪುರ) | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣ ತಲಘಟ್ಟಪುರ, ಕನಕಪುರ ಮೈನ್ ರೋಡ್ ಬೆಂಗಳೂರು ದಕ್ಷಿಣ 1 ತಾ॥, ಬೆಂಗಳೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | ಕ್ರಮ ಸಂಖ್ಯೆ 8 ರಿಂದ 12 ರವರೆಗೆ ನಮೂದಿಸಿರುವ ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳಿಗೆ ವರ್ಗಾವಣೆ ಸಂದರ್ಭದಲ್ಲಿ ಮಹಿಳಾ ಶಿಕ್ಷಕರಿಗೆ ಆದ್ಯತೆ ನೀಡಲು ಕೋರಿದೆ. |
| 9 | ಮೈಸೂರು | ದೊಡ್ಡಪೇಟೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಬೇಸಿಕ್ ನಜರಾಬಾದ್ ಹಿರಿಯ ಪ್ರಾಥಮಿಕ ಶಾಲಾ ಆವರಣ ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 10 | ದಕ್ಷಿಣ ಕನ್ನಡ | ಬೆಳ್ತಂಗಡಿ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಮಾದರಿ ಶಾಲಾ ಆವರಣ ಬೆಳ್ತಂಗಡಿ ಮುಖ್ಯ ರಸ್ತೆ, ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 11 | ಶಿವಮೊಗ್ಗ | ಆಗುಂಬೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಗುಂಬೆ ತೀರ್ಥಹಳ್ಳಿ ತಾ॥, ಶಿವಮೊಗ್ಗ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 12 | ಧಾರವಾಡ | ಹುಬ್ಬಳ್ಳಿ (ಘಂಟಕೇರಿ) | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ .5 ನೆಹರು ಕಾಲೇಜ್ ಎದುರು ಘಂಟಕೇರಿ, ಹುಬ್ಬಳ್ಳಿ ಸಿಟಿ, ಧಾರವಾಡ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| | 7 ಕೆ.ಜಿ.ಬಿ.ವಿ ಶಾಲೆಗಳು ಮತ್ತು 5 ವಸತಿ ಶಾಲೆಗಳಿಗೆ ವರ್ಗಾವಣೆ ಮೂಲಕ ತುಂಬಬೇಕಾಗಿರುವ ಒಟ್ಟು ಹುದ್ದೆಗಳು | | | | 12 | 12 | 12 | 12 | 48 | |

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ– ಕರ್ನಾಟಕ